**ಓ ಎಸ್ ನಂಃ 992/2014**
**ಡಿ ಡಬ್ಲ್ಯೂ ಃ 1**

**ದಿಃ 02.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ಜಿ ಯು ವಕೀಲರಿಂದಃ-**

ವಾದಿಗಳು ಈ ದಾವೆಯನ್ನು ದಾವಾ ಸ್ವತ್ತಿಗೆ ಮಾಲೀಕರೆಂದು ಘೋಷಿಸಬೇಕೆಂದು ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ. 157/1 ವಿಸ್ತೀರ್ಣ 3 ಎಕರೆ 28 ಗುಂಟೆ ಇದೆ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ವಾದ ಪತ್ರದಲ್ಲಿ ಚಕ್ಕುಬಂದಿಯನ್ನು ಸಹ ವಾದಿಗಳು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವದ ಕಡೆ ಚಿಕ್ಕಉಡುಗ ರವರ ಜಮೀನು, ಪಶ್ಚಿಮಕ್ಕೆ ಪಲೇಂದ್ರಪ್ಪನವರ ಜಮೀನು, ಉತ್ತರಕ್ಕೆ ರಸ್ತೆ ಮತ್ತು ದೇವಸ್ಥಾನ, ದಕ್ಷಿಣಕ್ಕೆ ಚಿಕ್ಕ ಸೋಲೂರು ಗ್ರಾಮಸ್ಥರಿಗೆ ಸೇರಿರುವ ಜಮೀನುಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ಸರಿ ಇಲ್ಲ ಎಂದು ಹೇಳಿ ತಮ್ಮ ಪ್ರತಿವಾದ ಪತ್ರದಲ್ಲಿ ಅಲ್ಲಗಳೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕ್ರಯದಾರರು ತಾವು ಆಗಿರುವ ಕಾರಣ ತಮ್ಮನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ಸರಿ. ನಿಡಿ 1 ರ ಕ್ರಯ ಪತ್ರದ ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ಸ್ವತ್ತಿನ ಚಕ್ಕುಬಂದಿಯನ್ನು ಯಾವ ದಾಖಲಾತಿ ಆಧಾರದ ಮೇರೆಗೆ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆ ಹಾಗೂ ದಾನಪತ್ರದ ಆಧಾರದ ಮೇರೆಗೆ ಎಂದು ನುಡಿಯುತ್ತಾರೆ. ದಾನ ಪತ್ರ ಯಾವುದು ಎಂದರೆ ಸಾಕ್ಷಿಯು ಚರ್ಚ್ ನವರು ನಮ್ಮ ಮಾರಾಟಗಾರರಿಗೆ ದಾನ ಪತ್ರವನ್ನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಾನಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಾವು ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನಿಪಿ 10 ರ ದಾಖಲಾತಿಯು ದಾನಪತ್ರ ಎಂದರೆ ಸರಿಯಲ್ಲ. ನನ್ನ ಮಾರಾಟಗಾರರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾನ ಪತ್ರವು 1986 ನೇ ಸಾಲಿನಲ್ಲಿ ಆಗಿದೆ. ಸದರಿ ದಾನ ಪತ್ರವು ತೆರೆಸಮ್ಮ ಅವರ ಗಂಡ ಸೆಲ್ವಮುತ್ತು, ಆಕೆಯ ತಾಯಿ ಫಾತಿಜಮ್ಮ ನವರಿಗೆ ಆಗಿರುತ್ತದೆ. ಸದರಿ ದಾನಪತ್ರವು ಯಾವ ದಿನಾಂಕ ಮತ್ತು ತಿಂಗಳಿಗೆ ಸಂಬಂಧಿಸಿದೆ ಎಂದರೆ ನನಗೆ ಈಗ ನೆನಪಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಸೆಲ್ವಮುತ್ತು ರವರಿಗೆ ಆಗಿರುವ ದಾನಪತ್ರವನ್ನು

**ಓ ಎಸ್ ನಂಃ 992/2014**
**ಡಿ ಡಬ್ಲ್ಯೂ ಃ 1**

ನಾನು ನೋಡಿ ತಿಳಿದುಕೊಂಡಿರುತ್ತೇನೆ. ತಮ್ಮ ಕ್ರಯ ಪತ್ರದಲ್ಲಿ ಸದರಿ ದಾನಪತ್ರದ ವಿಚಾರವನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ವಾದಿಗಳು ನಿಪಿ 10ರ ದಾನಪತ್ರವನ್ನು ತಾವು ನೋಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ತಾವು ತಮ್ಮ ಪ್ರತಿವಾದ ಪತ್ರವನ್ನು ತಯಾರು ಮಾಡುವ ಸಮಯದಲ್ಲಿ ತಮ್ಮ ವಕೀಲರಿಗೆ ವಾದಿಗಳಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಆಗಿರುವ ದಾನಪತ್ರದ ಬಗ್ಗೆ ತಿಳಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಿಃ 06.06.1936 ನೇ ಸಾಲಿನ ವಾದಿಗಳಿಗೆ ಆಗಿರುವ ದಾನಪತ್ರವನ್ನು ತಮ್ಮ ವಕೀಲರು ವಾದಿಗಳಿಗೆ ಹಾಜರುಪಡಿಸುವಂತೆ ಕೇಳಿದ್ದಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಜತ್ರುದ್ ಎಂಬುವವರು ತಮ್ಮ ಮಾರಾಟಗಾರರ ವಿರುದ್ಧ ಮಾಗಡಿಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವ ಸಂಖ್ಯೆ 88/2012 ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾವು ಸಾಕ್ಷಿದಾರರಾಗಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ಅಸಲು ದಾವಾ ಸಂಖ್ಯೆ 88/2012 ರಲ್ಲಿ ತಾವು ನೀಡಿರುವ ಮುಖ್ಯ ವಿಚಾರಣೆ ಮತ್ತು ಅಡ್ಡ ವಿಚಾರಣೆಯ ದೃಢೀಕೃತ ನಕಲಾಗಿದ್ದು ಸಾಕ್ಷಿಯು ಸದರಿ ದಾಖಲಾತಿಯನ್ನು ಸಾಕ್ಷಿಯು ನೋಡಿ ಒಪ್ಪಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಸದರಿ ದಾಖಲಾತಿಯನ್ನು **ನಿಪಿ 26** ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**